ಗೌರಿ ಲಂಕೇಶ್ ಹತ್ಯೆಗೆ ವ್ಯಾಪಕ ಖಂಡನೆ; ಹರಿದುಬಂದ ಜನಸಾಗರ

ಕುದಿಯುವ ಮನಸ್ಸುಗಳ ಆಕ್ರೋಶದ ಮೆರವಣಿಗೆ

ಅಭೂತಪೂರ್ವ ಯಶಸ್ಸು ಕಂಡ ಪ್ರತಿಭಟನೆ

ಮೈಸೂರು: ಪ್ರತಿಭಟನೆ, ಚಳವಳಿಗಳು ಅರ್ಥ ಕಳೆದುಕೊಳ್ಳುತ್ತಿರುವ ಹಾಗೂ ಸಾಂಕೇತಿಕವಾಗುತ್ತಿರುವ ಸಂದರ್ಭದಲ್ಲಿ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಖಂಡಿಸಿ ಮೈಸೂರಿನಲ್ಲಿ 'ಬಹುಮುಖಿ ಭಾರತ' ಆಯೋಜಿಸಿದ್ದ 'ನಾನು ಗೌರಿ' ಪ್ರತಿಭಟನಾ ಮೆರವಣಿಗೆ ಅಭೂತಪೂರ್ವ ಯಶಸ್ಸು ಕಂಡಿದೆ. ವಿದ್ಯಾರ್ಥಿ ಶಕ್ತಿಯನ್ನೂ ಪ್ರದರ್ಶಿಸಿದೆ. ಇತ್ತೀಚಿನ ದಿನಗಳಲ್ಲಿ ಚಳವಳಿಯೊಂದು ಮೈಸೂರಿನಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನಡೆದೇ ಇರಲಿಲ್ಲ. ಅದರಲ್ಲೂ ವಿದ್ಯಾರ್ಥಿಗಳು ಇಷ್ಟು ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ಪಾಲ್ಗೊಂಡಿರಲಿಲ್ಲ. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಯುವಕ ಯುವತಿಯರು, ಬಾಲಕಿಯರು ಕೊನೆಯವರೆಗೂ ತಾಳ್ಮೆಯಿಂದ, ಶಿಸ್ತಿನಿಂದ, ಉತ್ಸಾಹದಿಂದ ಇದ್ದದ್ದು ವಿಶೇಷವಾಗಿತ್ತು.

ಗೌರಿ ಲಂಕೇಶ್ ಹತ್ಯೆ ಖಂಡಿಸಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ನಡೆದ ಪ್ರತಿಭಟನಾ ಧರಣಿಯಲ್ಲಿ ಭಾಗವಹಿಸಿದ್ದ ಯುವತಿಯರ ಆಕ್ರೋಶ.

ಪ್ರತಿಭಟನಾ ಧರಣಿಯಲ್ಲಿ ಹೋರಾಟಗಾರರಾದ ಸಮಾಜವಾದಿ ಜಿಂತಕ ಪ.ಮಲ್ಲೇಶ್, ಜಿ.ಪಿ. ಬಸವರಾಜ್, ಒಡನಾಡಿಯ ಪರಶು ಮತ್ತಿತರರು ಭಾಗವಹಿಸಿದ್ದರು.

ಮೈಸೂರು,ಸೆ.೧೨– ಅಲ್ಲಿ ಆಕ್ರೋಶ ಮಡುಗಟ್ಟಿತ್ತು. ಅಸಹನೆ ಮನೆ ಮಾಡಿತ್ತು. ವ್ಯವಸ್ಥೆಯ ವಿರುದ್ಧ ಮನಸ್ಸುಗಳು ಕುದಿಯುತ್ತಿದ್ದವು. ಎಲ್ಲರ ಮುಖದಲ್ಲಿ ಕ್ರೋಧಾಗ್ನಿ ಏಳುತ್ತಿತ್ತು. ಪತ್ರಕರ್ತೆ, ಪ್ರಗತಿಪರ ಚಿಂತಕಿ ಗೌರಿ ಲಂಕೇಶ್ ಹಂತಕರ ಗುಂಡಿಗೆ ಬಲಿಯಾದ ಬಗ್ಗೆ ಎಲ್ಲರಲ್ಲೂ ನೋವಿತ್ತು.

ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು, ಅದರಲ್ಲೂ ಬಾಲಕಿಯರಲ್ಲಿ ಆಕ್ರೋಶ ಹೆಚ್ಚಾಗಿತ್ತು. ಮೆರವಣಿಗೆ ಆರಂಭದಿಂದ ಅಂತ್ಯದವರೆಗೂ ಅವರು ಕೊರಳಿಗೆ ವಿಶ್ರಾಂತಿ ನೀಡಲೇ ಇಲ್ಲ. ನ್ಯಾಯಕ್ಕಾಗಿ ಕೂಗಿದರು, ಸಾಮಾಜಿಕ ಸಂದೇಶ ಸಾರಿದರು, ಕೊಲ್ಲುವ ಸಂಸ್ಕೃತಿ ವಿರುದ್ಧ ಸಮರ ಸಾರಿದರು. ನ್ಯಾಯಕ್ಕಾಗಿ ಮೊರೆ ಇಟ್ಟರು.

ಗೌರಿ ಲಂಕೇಶ್ ಹತ್ಯೆ ಖಂಡಿಸಿ ಪ್ರಗತಿಪರರ ಒಕ್ಕೂಟ 'ಬಹುಮುಖಿ ಭಾರತ' ಸಂಘಟನೆ ಆಶ್ರಯದಲ್ಲಿ ಮಂಗಳವಾರ ಆಯೋಜಿಸಿದ್ದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ದಾರಿಯುದ್ದಕ್ಕೂ ಕಂಡುಬಂದ ದೃಶ್ಯ ಇದು.

ದಲಿತ ಸಂಘರ್ಷ ಸಮಿತಿ, ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ, ಎಐಡಿಎಸ್ಒ, ಸಿಪಿಐ, ಸಿಪಿಐ (ಎಂ), ಕಾರ್ಮಿಕ ಸಂಘಟನೆಗಳು, ಮಹಾರಾಜಾಸ, ಯುವರಾಜಾ, ಮಹಾರಾಣಿ ಕಾಲೇಜುಗಳ ವಿದ್ಯಾರ್ಥಿಗಳು, ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ, ಬಹುಜನ ವಿದ್ಯಾರ್ಥಿ ಸಂಘ, ಯುವ ಪ್ರಗತಿಪರ ಚಿಂತಕರ ಸಂಘ, ಒಡನಾಡಿ ಸೇವಾ ಸಂಸ್ಥೆ ಮಕ್ಕಳೂ ಸೇರಿದಂತೆ ಸಾವಿರಾರು ಮಂದಿ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

'ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ, ಕೊಲೆ ಮಾಡುವ ಹಕ್ಕು ಯಾರಿಗೂ ಇಲ್ಲ', 'ಕೊರಳು ಕತ್ತರಿಸಿದರೂ ಮುಚ್ಚಿಡಲಾಗದು ನಮ್ಮ ಧ್ವನಿ', 'ವೈಚಾರಿಕತೆ ಮೆರೆಯಲಿ ಮೌಢ್ಯತೆ ತೊಲಗಲಿ', 'ನಾವೆಲ್ಲರೂ ಒಂದೇ ವಿಶ್ವಾತ್ಮದ ಜೀವಾತ್ಮರು', 'ಗೋಡ್ಸೆ ನಮ್ಮ ದಾರಿಯಲ್ಲ ಗಾಂಧಿ ನಮ್ಮ ಬೆಳಕು', 'ಕೊಂದು ಕಟ್ಟಲಾಗದು ನಮ್ಮ ನಾಡನ್ನು, ಈ ರಾಷ್ಟ್ರ ಎಲ್ಲರದೂ', 'ಬಂದೂಕಿನ ಬಾಯಲ್ಲಿ ಗುಬ್ಬಿಗಳು ಗೂಡು ಕಟ್ಟಲಿ' ಎಂಬ ಘೋಷಣೆಗಳಿದ್ದ ಭಿತ್ತಿಫಲಕಗಳು ಇಂದಿನ ವ್ಯವಸ್ಥೆಯ ಕಣ್ಣು ತೆರೆಸುವಂತಿದ್ದವು.

ರಾಮಸ್ವಾಮಿ ವೃತ್ತದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಚಾಮರಾಜ ಜೋಡಿ ರಸ್ತೆ, ಬಸವೇಶ್ವರ ವೃತ್ತ, ಸಯ್ಯಾಜಿರಾವ್ ರಸ್ತೆ, ಜಗನ್ಮೋಹನ ಅರಮನೆ ರಸ್ತೆ, ಸಂತೆಪೇಟೆ, ಡಿ.ದೇವರಾಜ ಅರಸು ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿ ತಲುಪಿತು. ಅಲ್ಲಿ ಸಾಂಕೇತಿಕ ಪ್ರತಿಭಟನಾ ಧರಣಿ ನಡೆಸಲಾಯಿತು.

ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಪ್ರಗತಿಪರ ಚಿಂತಕರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಸಾಗಿದ ಪ್ರತಿಭಟನಾಕಾರರು ಗೌರಿ ಲಂಕೇಶ್ ಹತ್ಯೆ ಖಂಡಿಸಿ ಘೋಷಣೆ ಕೂಗಿದರು. ಹಂತಕರನ್ನು ಶೀಘ್ರ ಬಂಧಿಸುವಂತೆ ಒತ್ತಾಯಿಸಿದರು.

ಶಾಸಕ ಎಂ.ಕೆ.ಸೋಮಶೇಖರ್, ಬಹುಮುಖಿ ಭಾರತ ಪ್ರಗತಿಪರರ ಒಕ್ಕೂಟದ ಅಧ್ಯಕ್ಷ ಪ.ಮಲ್ಲೇಶ್, ಕೆ.ಮುದ್ದುಕೃಷ್ಣ, ಸ.ರ.ಸುದರ್ಶನ, ಜಿ.ಪಿ.ಬಸವರಾಜು, ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಸಿಪಿಐಎಂ ನಾಯಕರುಗಳಾದ ಲಜಪತ್ರಾಯ್, ಕೆ.ಬಸವರಾಜು, ಕಾರ್ಮಿಕ ಸಂಘಟನೆಗಳ ಒಕ್ಕೂಟದ ಎಚ್.ಆರ್. ಶೇಷಾದ್ರಿ, ಬಾಲಾಜಿ, ಜಯರಾಂ, ಒಡನಾಡಿಯ ಸ್ವಾಮಿ–ಪರಶು, ಪ್ರದೀಪ್, ಆಶಾ, ಕವಿತಾ, ವೀಣಾ, ಪ್ರಗತಿಪರ ಚಿಂತಕರಾದ ಡಾ.ಎಸ್. ತುಕಾರಾಂ, ಡಾ.ಮಹೇಶ್ ಚಿಂದ್ರಗುರು, ಪ್ರೊ.ಕಾಳಚನ್ನೇಗೌಡ, ಪ್ರೊ.ಕೆ.ಎಂ.ಜಯರಾಮಯ್ಯ, 'ಆಂದೋಲನ' ದಿನಪತ್ರಿಕೆಯ ಸಹಾಯಕ ಸಂಪಾದಕ ರವಿ ಕೋಟಿ, ಡಾ.ಹಾ.ತಿ. ಕೃಷ್ಣೇಗೌಡ, ಪ್ರೊ. ಆರ್.ಎಂ. ಚಿಂತಾಮಣಿ, ಜಿಪಂ ಮಾಜಿ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ವಕೀಲರು ಹಾಗೂ ಶಕ್ತಿಧಾಮದ ಟ್ರಸ್ಟಿಗಳೂ ಆದ ಎಂ.ಎನ್.ಸುಮನಾ, ಪ್ರೊ.ಬಿ.ಕೆ.ಸುಮಿತ್ರಾಬಾಯಿ, ಪ್ರೊ.ವಸಂತಮ್ಮ, ಪ್ರೊ.ಲತಾ ಕೆ.ಬದ್ದಪ್ಪ, ಪ್ರೊ.ಚ.ಸರ್ವ ಮಂಗಳಾ, ಶೋಭಾ, ಪ್ರೊ.ಎ.ಶಶಿಕಲಾ, ಸುಮತಿ, ನಂದಾ ಹಳೇಮನೆ, ಶಶಿಕಲಾ ರವಿಚಂದ್ರ, ಹಿರಿಯ ಪತ್ರಕರ್ತರಾದ ಚಿನ್ನಸ್ವಾಮಿ ವಡ್ಡಗೆರೆ, ಲೋಕೇಶ್ ಮೊಸಳೆ, ರವಿಚಂದ್ರ ಚಿಕ್ಕೆಂಪಹುಂಡಿ, ಶಾಂತರಾಜು, ನೇಸರ ಕಾಡನಕುಪ್ಪೆ, ಗ.ಶಾ. ಭೋಗಾನಂದೀಶ್, ಡಾ.ಎಂ.ದಿಲೀಪ್ ನರಸಯ್ಯ, ಪ್ರಗತಿಪರ ಹೋರಾಟಗಾರರಾದ ಬನ್ನೂರು ಕೆ.ರಾಜು, ಹೊರೆಯಾಲ ದೊರೆಸ್ವಾಮಿ, ಎಂ.ಬಿ.ವಿಶ್ವನಾಥ್, ಈ.ಧನಂಜಯ ಎಲಿಯೂರು, ಉಗ್ರ ನರಸಿಂಹೇಗೌಡ, ಪುಣಜನೂರು ದೊರೆಸ್ವಾಮಿ, ಕೆ.ವೆಂಕಟರಾಜು, ಮೈಸೂರು ಕನ್ನಡ ವೇದಿಕೆ ಎಸ್.ಬಾಲಕೃಷ್ಣ, ಪಿ.ಪಿ. ಬಾಬುರಾಜ್, ನಿರಂತರ ಪ್ರಸಾದ್ ಕುಂದೂರು, ಚಲನಚಿತ್ರ ನಿರ್ದೇಶಕ ರಘು, ಬಿ.ರಾಜೇಶ್, ಪ್ರವೀಣ್, ಹರೀಶ್, ಎಡತೊರೆ ಮಹದೇವಯ್ಯ, ವಿಜಯಕುಮಾರ್, ತಾ.ರಾ.ನಟರಾಜ್, ದಲಿತ ಸಂಘರ್ಷ ಸಮಿತಿಯ ಬೆಟ್ಟಯ್ಯ ಕೋಟೆ, ರತ್ನಪುರಿ ಮಟ್ಟಸ್ವಾಮಿ, ಶಂಭು ಲಿಂಗಸ್ವಾಮಿ, ಹೆಗ್ಗನೂರು ನಿಂಗರಾಜು, ಬಿ.ಡಿ.ಶಿವಬುದ್ಧಿ, ಹರಿಹರ ಆನಂದಸ್ವಾಮಿ, ಎಸ್.ಡಿಪಿಐ ಬಿಲೀಮುಲ್ಲಾ, ರೈತ ಸಂಘದ ಹೊಸಕೋಟೆ ಬಸವರಾಜು ಸೇರಿದಂತೆ ಹಲವು ಪ್ರಗತಿಪರ ಮುಖಂಡರು, ಚಿಂತಕರು, ಸಾಹಿತಿಗಳು, ಹೋರಾಟಗಾರರು ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಮೈಸೂರು ವಿವಿ ವಿದ್ಯಾರ್ಥಿಗಳ ಬೆಂಬಲ: ಗೌರಿ ಹತ್ಯೆ ಖಂಡಿಸಿ 'ಬಹುಮುಖಿ ಭಾರತ' ಮೈಸೂರು ಪ್ರಗತಿಪರರ ಒಕ್ಕೂಟ ಹಮ್ಮಿಕೊಂಡಿದ್ದ ಬೃಹತ್ ಮೆರವಣಿಗೆಗೆ ಬೆಂಬಲ ಸೂಚಿಸಿ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ, ಬಹುಜನ ವಿದ್ಯಾರ್ಥಿ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಯುವ ಪ್ರಗತಿಪರ ಚಿಂತಕರ ಸಂಘ ಮತ್ತು ಎಲ್ಲ ಪ್ರಗತಿಪರ ಸಂಘಟನೆಗಳವರು ಬಟ್ಟುಗೂಡಿ ಮಾನಸ ಗಂಗೋತ್ರಿಯ ಗಡಿಯಾರ ವೃತ್ತದಿಂದ ನಡೆಗೆಯಲ್ಲಿ ಜಾಥಾ ಹೊರಟು ಜಿಲ್ಲಾಧಿಕಾರಿ ಕಚೇರಿ ತಲುಪಿ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ಚಿಂತಕರ ಸಂಘದ ಅಧ್ಯಕ್ಷ ಬಿ.ಶಿವಶಂಕರ ಮೂರ್ತಿ, ಕಾರ್ಯದರ್ಶಿ ಬಸವರಾಜು (ಕಂದ), ಮೈಸೂರು ವಿವಿ ಸಂಶೋಧಕರ ಸಂಘದ ಉಪಾಧ್ಯಕ್ಷ ಚಿಂದ್ರಮೌಳಿ, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಎಸ್.ವಿ.ಅಜಯ್ ರಾಜ್, ಉಪಾಧ್ಯಕ್ಷರಾದ ನಾಗರತ್ನ ಮತ್ತು ಎಂ.ರಂಜಿತ, ನಟರಾಜ ಶಿವಣ್ಣ, ದಲಿತ ವಿದ್ಯಾರ್ಥಿ ಒಕ್ಕೂಟದ ಮಾಜಿ ಅಧ್ಯಕ್ಷ ಶಿವಣ್ಣ, ಜಿಲ್ಲಾ ಅಧ್ಯಕ್ಷ ನವೀನ್ ಮೌರ್ಯ, ಸಂಶೋಧಕರಾದ ದುಂಡಯ್ಯ ಎಲ್ಲೇಮಾಳ, ಪ್ರಸಾದ ರಾಘವಪುರ, ಎಂ.ರಾಜೇಶ, ಎಂ.ಬಿ.ರವಿಕುಮಾರ್, ಸಿ.ಆರುಣ ಕುಮಾರ್, ಎಸ್.ಮರಿದೇವಯ್ಯ, ಬಿ.ಬಸವರಾಜ, ಶಿವಮೂರ್ತಿ, ಸುಚಿನ್, ಮಹೇಶ್ ಸೋಸಲೆ, ಗುರುಮೂರ್ತಿ, ಪವನ್ ಕುಮಾರ್, ಗೌತಮ್ ದೇವನೂರು, ಶ್ರೇಯಸ್ ದೇವನೂರು, ಮಹದೇವಸ್ವಾಮಿ, ಏನೋದ್, ಅರುಣ್, ಚೈತ್ರ, ಧನಲಕ್ಷ್ಮಿ, ಆಕಿಶ, ಮಹಮದ್ ಮತ್ತಿತರರು ಭಾಗವಹಿಸಿದ್ದರು.

ಹಿಂದೂ ಉಗ್ರವಾದಿಗಳ ಮೇಲೆ ಅನುಮಾನ

ಗೌರಿ ಲಂಕೇಶ್ ಅವರ ಹತ್ಯೆಯನ್ನು ಹಿಂದೂ ಉಗ್ರವಾದಿಗಳೇ ಮಾಡಿರುವ ಸಾಧ್ಯತೆ ಬಲವಾಗಿದೆ. ಗೌರಿ ಅವರು ಮೂಲ ಭೂತವಾದದ ವಿರುದ್ಧವಾಗಿದ್ದರು. ಆದರೆ, ಅವರನ್ನು ಕೊಲೆಗೈಯ್ಯುವ ಮೂಲಕ ಸಂವಿಧಾನಬದ್ಧ ಮೂಲಭೂತ ಹಕ್ಕಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ ಮಾಡಲಾಗಿದೆ.

–ಕೆ.ಬಸವರಾಜು,
ಮೈಸೂರು ಜಿಲ್ಲಾ ಕಾರ್ಯದರ್ಶಿ, ಸಿಪಿಐ(ಎಂ)

ವಾಕ್ ಸ್ವಾತಂತ್ರ್ಯ ಹತ್ತಿಕ್ಕುವ ಯತ್ನ

ಗೌರಿ ಲಂಕೇಶ್ ಅಂತಹ ತಪ್ಪು ಮಾಡಿದ್ದಾದರೂ ಏನು? ಅವರ ಹತ್ಯೆಯು ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನವಾಗಿದೆ. ವಿಚ್ಛಿದ್ರಕಾರಿ ಮಾತನಾಡುವ ಜೀವಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯ ಆಗಬೇಕು.

–ಸ್ವಾಮಿ–ಪರಶು, ನಿರ್ದೇಶಕರು,
ಒಡನಾಡಿ ಸೇವಾ ಸಂಸ್ಥೆ

ದುಷ್ಟ ಶಕ್ತಿಗಳನ್ನು ಎದುರಿಸದಿದ್ದರೆ ಅಪಾಯ

ಮೂಲಭೂತವಾದ ವಿಜೃಂಭಿಸಿ, ಸರ್ವಾಧಿಕಾರ ಮೆರೆದು, ತಾನು ಒಪ್ಪದ ಎಲ್ಲರನ್ನೂ ಕೊಲೆ ಮಾಡುತ್ತಾ ಹೋಗುವ ಈ ದುಷ್ಟ ಶಕ್ತಿಗಳನ್ನು ನಾವು ಪ್ರಜ್ಞಾಶಾತ್ತಕ್ಕವಾಗಿ ಎದುರಿಸದಿದ್ದರೆ ಬಹುದೊಡ್ಡ ಅಪಾಯವನ್ನು ನೋಡಬೇಕಾಗುತ್ತದೆ.

–ಜಿ.ಪಿ.ಬಸವರಾಜು, ಚಿಂತಕರು

ಕೋಮುವಾದ ವಿರೋಧಿ ಹೋರಾಟಕ್ಕೆ ಬೆಂಬಲ

ಇವತ್ತಿನ ಪ್ರತಿಭಟನೆ ಗೌರಿ ಲಂಕೇಶ್ ಪರ ಅಲ್ಲ; ಅವರು ಪ್ರತಿನಿಧಿಸುತ್ತಿದ್ದ ಹಿಂಸಾ ವಿರೋಧಿ, ಕೋಮುವಾದ ವಿರೋಧಿ ಹೋರಾಟವನ್ನು ಬೆಂಬಲಿಸುವುದಕ್ಕಾಗಿ. ಅವರು ಸಮ ಸಮಾಜ, ಹಿಂಸಾ ವಿರೋಧಿ ಸಮಾಜ ನಿರ್ಮಾಣದ ಆಶಯವನ್ನು ಹೊಂದಿದ್ದರು. ಅಂತಹ ಚಟುವಟಿಕೆಗಳನ್ನು ವಿರೋಧಿಸಿದವರ ವಿರುದ್ಧ ನಮ್ಮ ಪ್ರತಿರೋಧವನ್ನು ದಾಖಲಿಸುವುದಕ್ಕಾಗಿ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದೆವು.

–ಚಿನ್ನಸ್ವಾಮಿ ವಡ್ಡಗೆರೆ, ಚಿಂತಕರು

ಹೋರಾಟಕ್ಕೆ ಅಣಿಯಾಗದಿದ್ದರೆ ದುಷ್ಟತ್ವ ಹೆಚ್ಚಳ

ಪತ್ರಿಕಾ ಮಾಧ್ಯಮದ ಮೇಲೆ ದೌರ್ಜನ್ಯ ನಡೆಯುತ್ತಿರುವುದು ಆತಂಕದ ಸಂಗತಿ. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ವಿಚಾರವಾದಿಗಳು ತಳಮಟ್ಟದಿಂದ ವಿದ್ಯಾರ್ಥಿಗಳನ್ನು ಸಂಘಟಿಸಿ ಹೋರಾಟಕ್ಕೆ ಅಣಿಗೊಳಿಸದಿದ್ದರೆ ಇಂತಹ ದುಷ್ಟತ್ವಗಳು ಹೆಚ್ಚುತ್ತಾ ಹೋಗುತ್ತವೆ.

–ಹೊಸಕೋಟೆ ಬಸವರಾಜು, ಜಿಲ್ಲಾ ಕಾರ್ಯದರ್ಶಿ,
ರೈತ ಸಂಘ, ಮೈಸೂರು

ಹಂತಕರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆಗೊಳಪಡಿಸಲಿ

ಪ್ರಸ್ತುತ ಸಂದರ್ಭದಲ್ಲಿ ದಕ್ಷಿಣ ಭಾರತವೇ ಆತಂಕ ಎದುರಿಸುತ್ತಿದೆ. ಜೊ.ಎಂ.ಎಂ.ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಅವರ ಕೊಲೆಗಳ ನಿಷ್ಪಕ್ಷಪಾತ ತನಿಖೆಯಾಗಬೇಕು. ಈ ಕೊಲೆಗಳ ಹಂತಕರನ್ನು ಪತ್ತೆ ಮಾಡಿ ಕಠಿಣ ಶಿಕ್ಷೆಗೊಳಪಡಿಸುವ ಮೂಲಕ ಸಮಾಜದ್ರೋಹಿಗಳಿಗೆ ಎಚ್ಚರಿಕೆ ನೀಡಬೇಕು. ಅಭಿಪ್ರಾಯ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಕೆಲಸ ಆಗಬೇಕು.

–ಬೆಟ್ಟಯ್ಯ ಕೋಟೆ, ಸಂಚಾಲಕರು, ದಸಂಸ ಜಿಲ್ಲಾ ಶಾಖೆ, ಮೈಸೂರು

ಭಿನ್ನಾಭಿಪ್ರಾಯ ಸಾವನ್ನು ತಂದು ನಿಲ್ಲಿಸಿವೆ!

ಹಿಂದೆ ಲೋಹಿಯಾ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ನಡುವೆಯೂ ವಿಚಾರ ಭೇದ ಇತ್ತು. ಆದರೆ, ಯಾರೂ ಒಬ್ಬ ವ್ಯಕ್ತಿಯನ್ನು ಮುಗಿಸುವಂತಹ ಅತ್ಯಂತ ನೀಚ ಮಟ್ಟಕ್ಕೆ ಇಳಿದಿರಲಿಲ್ಲ. ಇವತ್ತು ಭಿನ್ನಾಭಿಪ್ರಾಯಗಳು ವಿಚಾರವಾದಿಗಳ ಮನೆ ಬಾಗಿಲಿಗೇ ಸಾವನ್ನು ತಂದು ನಿಲ್ಲಿಸಿವೆ.

–ಎಂ.ಎನ್.ಸುಮನಾ, ಪ್ರಗತಿಪರ ಚಿಂತಕರು.

ಆತ್ಮಸಾಕ್ಷಿ ಕಾಡದಿದ್ದರೆ...

ತಾಯ್ತನದ ಚಿಂತಕ ಪಿ.ಲಂಕೇಶ್ ಅವರ ಪುತ್ರಿ ಗೌರಿ ಅವರ ಕೊಲೆಯಿಂದ ನಾವು ಸೈಕಿಕವಾಗಿ ಬಡವರೋ ದಿವಾಳಿಯೋ ಆಗಿದ್ದೇವೆ ಎಂಬ ಅನುಮಾನ ಮೂಡಿದೆ. ಅಪ್ಪನ ಕಾರುಣ್ಯ ಗೌರಿ ಅವರಿಗೂ ಇತ್ತು. ಅವರನ್ನು ಹೊಡೆದವರು, ಹೊಡೆಸಿಕೊಂಡಿದ್ದನ್ನು ನೋಡಿದವರನ್ನು ಆತ್ಮಸಾಕ್ಷಿ ಕಾಡಿದರೆ ಮಾತ್ರ ನಮ್ಮ ಮಕ್ಕಳನ್ನು, ನಾಳೆಯನ್ನು ಉಳಿಸಿಕೊಳ್ಳುವುದು ಸಾಧ್ಯ.

–ಡಾ.ಎಸ್.ತುಕಾರಾಂ, ಚಿಂತಕರು

ಗುಂಡಿನಿಂದ ಉತ್ತರಿಸುವ ಸಂಸ್ಕೃತಿಗೆ ಧಿಕ್ಕಾರ

ಸತ್ಯ ಹೇಳುವ ಲೇಖನಿಗಳಿಗೆ, ವಿಚಾರ ಹೇಳುವ ಲೇಖಕರಿಗೆ ಹಾಗೂ ವೈಚಾರಿಕತೆಗೆ ಗುಂಡಿನ ಮೂಲಕ ಉತ್ತರ ಕೊಡುತ್ತಿರುವ ಸಂಸ್ಕೃತಿಗೆ ನಾಚಿಕೆಯಾಗಬೇಕು. ಇದಕ್ಕೆ ಧಿಕ್ಕಾರವಿರಲಿ. ಸತ್ಯವನ್ನು ಗುಂಡಿನಿಂದ ಮುಚ್ಚಲು ಸಾಧ್ಯವೇ? ಅನಾದಿಕಾಲದಿಂದ ಸತ್ಯ ಹೇಳಿಕೊಂಡು ಬಂದವರನ್ನು ಕೊಲೆ ಮಾಡಿದರೆ ಹೇಗೆ? ಇದು ಕೊಳೆಗಾಡಿಕ ದೇಶವೇ? ಪ್ರಬುದ್ಧ ದೇಶವೇ? ಇಡೀ ಭಾರತದ ಮಣ್ಣಿನ ಗುಣವೇ ವೈಚಾರಿಕತೆಯಿಂದ ಕೂಡಿದೆ. ಮೂರ್ಖರೇ, ನಿಮ್ಮ ಗುಂಡಿನ ಮಾತು ನಮ್ಮ ಮುಂದೆ ನಿಲ್ಲುವುದಿಲ್ಲ.

–ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ